ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಮೇಲೆ ಮಾಡಲಾದ ಆದೇಶದ ಮೇರೆಗೆ ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಿದ ದಿನಾಂಕಃ**05.12.2025**

ಮುಂದುವರಿದ **ಮುಖ್ಯ ವಿಚಾರಣೆಃ ಶ್ರೀಯು**ತ ಎನ್ ಕೆ ಕೆ **ವಕೀಲರಿಂದಃ** ವಾದಿ ಪರಃ

ಪ್ರತಿವಾದಿ ತಮ್ಮ ಹೆಚ್ಚುವರಿ ಪ್ರತಿವಾದ ಪ್ರದಲ್ಲಿ ತಿಳಿಸಿರುವಂತೆ ದಾವಾ ಸಿ ಶೆಡ್ಯೂಲ್ ಆಸ್ತಿಯೂ ಸಹ ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ಎಂದು ಹೇಳಿರುವುದು ಸರಿಯಲ್ಲ. ದಾವಾ ಸ್ವತ್ತುಗಳ ಪೈಕಿ **2000** ನೇ ಸಾಲಿನಲ್ಲಿ ಯಾವುದೇ ಬಾಯ್ದೆರೆ ಪಾಲು ಆಗಿಲ್ಲ. ಪ್ರತಿವಾದಿ ತಿಳಿಸಿರುವಂತೆ ಒಟ್ಟು ಕುಟುಂಬಕ್ಕೆ ಸೇರಿದ ಮನೆಯನ್ನು ನಾನು ಕೆಡವಿಲ್ಲ ಅದು **100** ವರ್ಷಕ್ಕೂ ಹಳೆಯದಾದ ಮನೆಯಾಗಿದ್ದು ಶಿಥಿಲಗೊಂಡು ಬೀಳುತ್ತಾ ಬರುತ್ತಿತ್ತು.

ಪಾಟೀ ಸವಾಲುಃ ಶ್ರೀ ಡಿ ಕೆ ಎನ್ ವಕೀಲರಿಂದಃ ಪ್ರತಿವಾದಿ ಪರಃ

ಸುಮಾರು 10 ವರ್ಷಕ್ಕೂ ವಮೊದಲಿನಿಂದ ಗುಣೋಡಗಗಳಿಗೆ ನೀರು ಸೇರಿಕೊಂಡು ಬೀಳಲು ಪ್ರಾರಂಭವಾಯಿತು. ಸುಮಾರು 3 ವರ್ಷಗಳ ಹಿಂದೆ ಆ ಮನೆ ಸಂಪೂರ್ಣ ಬಿದ್ದಿರುತ್ತದೆ. ನಾನು ಡಿಗ್ರಿ ವ್ಯಾಸಂಗ ಮಾಡಿದ್ದು ಅದು ಅಪೂರ್ಣವಾಗಿರುತ್ತದೆ. ಮೋಹನಗೌಡ ಇಡ್ಯಡ್ಕ ಎಂಬುವವರು ವಕೀಲರು. ಗೋಪಾಲಕೃಷ್ಣ ಪಟೇಲ್ ಚಾರ್ವಾಕ ಎನ್ನುವವರು ಗೊತ್ತಿಲ್ಲ. ಅವರ ಗೋಪಾಲಕೃಷ್ಣ ಪಟೇಲ್ ಎನ್ನುವವರು ಚಾರ್ವಾಕದಲ್ಲಿ ಇರಬಹುದು. ಗೋಪಾಲಕೃಷ್ಣ ಪಟೇಲ್ ಎನ್ನುವವರು ನನ್ನ ಒಳ್ಳೆಯ ಪರಿಚಯಸ್ಥರು ಎಂದರೆ ಸರಿಯಲ್ಲ.

2. ನಿಪಿ-30 ಹಾಗೂ 31 ಹಕ್ಕು ಖುಲಾಸೆ ಪತ್ರಗಳಿಗೆ ಸಾಕ್ಷಿಗಳಾಗಿ ಯಾರೆಲ್ಲಾ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನೆನಪಿಲ್ಲ, ನನ್ನ ಮಾವನಾದ ಬಾಬುಗೌಡ ಎನ್ನುವವರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆಂದು ನುಡಿಯುತ್ತಾರೆ. ಎರಡು ಖುಲಾಸಾ ಪತ್ರಗಳು ಒಂದೇ ದಿನ ನೋಂದಣಿಯಾಗಿವೆ. ಆ ಎರಡೂ ಖುಲಾಸಾ

ಪತ್ರಗಳಿಗೆ ನಮ್ಮ ಕುಟುಂಬದವರಾದ ಗೋಪಾಲಕೃಷ್ಣ ಪಟೇಲ್ ಎನ್ನುವವರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆ.

3. ಮಾರಪ್ಪ ಶೆಟ್ಟಿ ದೋಲ್ಪಾಡಿ ಎನ್ನುವವರು ನನಗೆ ಗೊತ್ತು. ಬಿಳಿಯಪ್ಪ ಗೌಡ ಎನ್ನುವವರು ನನ್ನ ಮಾವ. ಶಿವಪ್ಪ ಗೌಡ ಕುಂಬಾಡಿ ಎನ್ನುವವರು ನನ್ನ ಭಾವ. ಸೋಣಂಗೇರಿ ಜನಾರ್ಧನ ಗೌಡ ಎನ್ನುವವರು ನನ್ನ ತಂಗಿ ಬೇಬಿಯವರ ಗಂಡ. ಮೇಲೆ ತಿಳಿಸಿದ ವ್ಯಕ್ತಿಗಳ ಸಹಿಗಳನ್ನು ನೋಡಿದರೆ ಗುರುತಿಸಬಲ್ಲೆ. ನನ್ನ ತಂದೆ ಸುಬ್ರಾಯಗೌಡರವರು ಜೀವಂತ ಇದ್ದಾಗ ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಿದ್ದರು. ನ್ಯಾಯಾಲಯದ ಸಮಕ್ಷಮ ಹಾಜರಿರುವ ಪ್ರತಿವಾದಿ ನನ್ನ ಅಣ್ಣ. ಅವರು ಕನ್ನಡದಲ್ಲಿ ಸಹಿ ಮಾಡುತ್ತಾರೆ ಎಂದರೆ ಸಾಕ್ಷಿಯು ಕನ್ನಡದಲ್ಲಿ ಸಹಿ ಮಾಡುವುದನ್ನು ನೋಡಿಲ್ಲ, ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಾರೆಂದು ನುಡಿಯುತ್ತಾರೆ.

4. ಸಾಕ್ಷಿಗೆ ದಿ.12.03.2006 ರಲ್ಲಿ ಮಾಡಿದ್ದಾರೆಎಂದು ಹೇಳದಾ ಗೃಹಸ್ಥರ ಸಮಕ್ಷಮ ಮಾಡಲಾದ ತೀರ್ಮಾನ ಎಂದು ನಮೂದಿರುವ ಒಂದು ದಾಖಲೆಯ ಜೆರಾಕ್ಸ್ ಪ್ರತಿ ತೋರಿಸಿ ಅದರಲ್ಲಿ ಇರುವ ಸಹಿಗಳನ್ನು ಗುರುತಿಸಿ ಗುರುತಿಸಬಹುದಾ ಎಂದರೆ ಸಾಕ್ಷಿಯು ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಗರೆ.

5. ದಿ.12.3.2006 ರಂದು ಮೇಲೆ ತಿಳಿಸಿದ 6 ವ್ಯಕ್ತಿಗಳ ಸಮಕ್ಷಮ ನಾನು, ಪ್ರತಿವಾದಿ ಹಾಗೂ ನನ್ನ ತಂದೆ ಸುಬ್ರಾಯಗೌಡರವರ ಮದ್ಯೆ ಒಂದು ತೀರ್ಮಾನ ಆಗಿದೆ ಎಂದರೆ ಸುಳ್ಳು. ದಿ.12.03.2006 ರಲ್ಲಿ ಮಾಡಿದ್ದಾರೆ ಎಂದು ಹೇಳಲಾದ ಗೃಹಸ್ಥರ ಸಮಕ್ಷಮ ಮಾಡಲಾದ ತೀರ್ಮಾನ ಎನ್ನುವ ಅಸಲು ದಾಖಲೆ ನನ್ನ ಬಳಿ ಇದೆ ಎಂದರೆ ಸುಳ್ಳು. ಆ ದಾಖಲೆಯ ಯಥಾಪ್ರತಿ ಜೆರಾಕ್ಸನ್ನು ನನ್ನ ಅಣ್ಣ ಪ್ರತಿವಾದಿಗೆ ನಾನು ಕೊಟ್ಟಿದ್ದೇನೆ ಎಂದರೆ ಸುಳ್ಳು. ಆ ದಾಖಲೆ ತಯಾರು ಮಾಡಲು ಠಸ್ಸೆ ಪೇಪರನ್ನು ಎಸ್ ಬಿ ಎಮ್, ಪುತ್ತೂರಿನಿಂದ ದಿ.4.3.2006 ರಂದು ನನ್ನ ಹೆಸರಿನಲ್ಲಿ ನಾನೇ ಖರೀದಿ ಮಾಡಿದ್ದೇನೆ ಎಂದರೆ ಸುಳ್ಳು.

6. ಪ್ರತಿವಾದಿ ದಾವಾ ಇ ಶೆಡ್ಯೂಲ್ ನಲ್ಲಿ ತೋರಿಸಿರುವ 6 ಎಕರೆ 20 ಸೆಂಟ್ ಜಾಗವನ್ನು ಪ್ರತಿವಾದಿ ನಮ್ಮ ಜೊತೆ ನಿಲ್ಲುವುದಿಲ್ಲ, ಖರ್ಚಿಗೆ ಸ್ವಲ್ಪ ಭೂಮಿ ಕೊಡಿ ಎಂದು ಕೇಳಿದ ಕಾರಣ ನಕ್ಷೆಯ ಆಧಾರದ ಮೇಲೆ ಆ ಸ್ವತ್ತನ್ನು ಪ್ರತಿವಾದಿಯ ಸ್ವಾಧೀನಕ್ಕೆ ಕೊಡಲಾಗಿದೆ. ಸಾಕ್ಷಿ ಮುಂದುವರಿದು ಪ್ರತ್ಯೇಕ ಪ್ರತ್ಯೇಕವಾಗಿ ಪಾಲು ಆಗದ ಕಾರಣ ನಕ್ಷೆ ಮಾಡಲಾಗಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ನಂತರ ಮುಂದುವರಿದ ನನ್ನ ಹತ್ತಿರ ನಾನು ಹೇಳುತ್ತಿರುವ ನಕ್ಷೆ ಇದೆ ಎಂದು ನುಡಿಯುತ್ತಾರೆ. ನನ್ನ ಬಳಿ ಇರುವ ನಕ್ಷೆಗೆ ಯಾರು ಸಹಿ ಮಾಡಿಲ್ಲ. ನನ್ನ ಬಳಿ ಇರುವ ನಕ್ಷೆಗೆ ಸರ್ವೇಯರ್ ರವರ ಸಹಿ ಮಾಡಲಾಗಿದ್ದು ಅದು ಇಡೀ ಕುಟುಂಬದ ಸ್ವತ್ತುಗಳಿಗೆ ಸಂಬಂಧಿತ ನಕ್ಷೆಯಾಗಿರುತ್ತದೆ. ಆ ನಕ್ಷೆ ನನ್ನ ಮನೆಯಲ್ಲಿರುತ್ತದೆ. ನಕ್ಷೆಯನ್ನು ತಯಾರು ಮಾಡಿದ ಸರ್ವೇಯರ್ ರವರ ಹೆಸರು ಗೊತ್ತಿಲ್ಲ. ಸರ್ವೆ ಇಲಾಖೆಗೆ ಅರ್ಜಿ ಕೊಟ್ಟ ನಂತರ ಅವರು ನಕ್ಷೆಯನ್ನು ತಯಾರಿಸಿದ್ದಾರೆ. ಯಾವ ಇಸವಿಯಲ್ಲಿ ಆ ರೀತಿ ಅರ್ಜಿ ಕೊಟ್ಟು ನಕ್ಷೆ ತಯಾರಿಸಲಾಗಿದೆ ಎಂದು ನೆನೆಪಿಲ್ಲ. ಆ ನಕ್ಷೆಯನ್ನು ಸುಮಾರು 10 ವರ್ಷಗಳ ಹಿಂದೆ ತಯಾರಿಸಲಾಗಿದೆ. ಆ ನಕ್ಷೆಯನ್ನು ನನ್ನ ಬದುಕಿದ್ದಾಗ ಪಡೆಯಲಾಯಿತೋ ಅಥವಾ ಅವರು ಮೃತರಾದ ನಂತರ ಪಡೆಯಲಾಯಿತೋ ಎಂದು ನನಗೆ ಸರಿಯಾಗಿ ಗೊತ್ತಿಲ್ಲ.

7. ಪ್ರತಿವಾದಿಗೆ 2000 ಸಾಲಿನಲ್ಲಿ ನಾನು ನನ್ನ ವಾಕ್ಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ತಾತ್ಕಾಲಿಕವಾದ ದಾವಾ ಇ ಶೆಡ್ಯೂಲ್ ಸ್ವತ್ತನ್ನು ತಾತ್ಕಾಲಿಕ ವ್ಯವಸ್ಥೆ ಮಾಡಿಕೊಡಲಾಗಿದೆ. ಅದರ ಸಂಬಂಧಿತವಾಗಿ ಪ್ರತಿವಾದಿಯಿಂದ ನಾವು ಯಾವುದೇ ದಾಖಲೆಯನ್ನು ಪಡೆದುಕೊಂಡಿಲ್ಲ. ಆ ಸಮಯದಲ್ಲಿ ಪ್ರತಿವಾದಿಗೆ ಎಷ್ಟು ಎಕರೆ ಸ್ವತ್ತನ್ನು ಕೊಡಲಾಯಿತು ಎಂಬ ಬಗ್ಗೆ ನನಗೆ ಆಗ ಗೊತ್ತಿರಲಿಲ್ಲ. ನನಗೆ 2000 ನೇ ಸಾಲಿನ ಕೊನೆಯಲ್ಲಿ 6 ಎಕರೆ 20 ಸೆಂಟ್ಸ್ ಜಾಗವನ್ನು ಪ್ರತಿವಾದಿಗೆ ಕೊಡಲಾದ ವಿಚಾರ ಗೊತ್ತಾಯಿತು. ನಾನು ಸರ್ವೇಯರ್ ರವರನ್ನು ಗಡಿ ಗುರುತು ಮಾಡಿಸಲು ಜಾಗಕ್ಕೆ ಕರೆದುಕೊಂಡು ಬಂದಾಗ ನನಗೆ

ಪ್ರತಿವಾದಿಗೆ ಸೊತ್ತು ಕೊಡಲಾದ ವಿಚಾರ ಗೊತ್ತಾಯಿತು. ಪ್ರತಿವಾದಿಗೆ 6 ಎಕರೆ 20 ಸೆಂಟ್ ಜಾಗವನ್ನು ಕೊಟ್ಟಿರುವ ಬಗ್ಗೆ ಸರ್ವೆಯರ್ ರವರು ಬರೆದುಕೊಟ್ಟಿಲ್ಲ.

8. ಪ್ರತಿವಾದಿಗೆ ಇ ಶೆಡ್ಯುಯಾಲ್ ಸೊತ್ತನ್ನು ಕೊಟ್ಟ ನಂತರ ಆ ಸೊತ್ತಿನಲ್ಲಿ ಅವರೇ ಕೃಷಿ ಕೃತಾವಳಿ ಅಬಿವೃದ್ಧಿ ಕಾರ್ಯಗಳನ್ನು ಮಾಡುತ್ತಿದಾದರೆ, ಅವರು ಕೃಷಿ ಕೃತಾವಳಿ ಮಾಡಿರುವ ಜಾಗದಲ್ಲಿ ರಬ್ಬರ್, ತೋಟ, ತೆಂಗಿನ ಮರ ಇರುತ್ತವೆ. ಪ್ರಸ್ತುತ ಈ ದಿನ ಪ್ರತಿವಾದಿ ಕೃಷಿ ಕೃತಾವಳಿ ಮಾಡುತ್ತಿರುವ ಸೊತ್ತಿನಲ್ಲಿ ರಬ್ಬರ್ ಹಾಗೂ ಅಡಿಕೆ ಮರಗಳು ಎಷ್ಟು ಇವೆ ಎಂದು ಗೊತ್ತಿಲ್ಲ.

ಈ ಹಂತದಲ್ಲಿ ಸಾಕ್ಷಿಯ ಮುಂದುವರಿದ ಪಾಟೀಸವಾಲಿಗಾಗಿ ಮಾನ್ಯ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ನೀಡಲಾಗಿದೆ.

(ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು